

# ಹಳೆ ಬೆಂಗಳೂರಿನ ಚೆಲುವು ಅರಸಿದ ಭೂಮಿ




ನಟಿಯರು ಫೋಟೊಶೂಟ್ ಮಾಡಿಸುವುದು ಹೊಸ ಸಂಗತಿಯೇನಲ್ಲ. ಆದರೆ ಈಚೆಗೆ ನಟಿ ಭೂಮಿ ಶೆಟ್ಟಿ ಮಾಡಿಸಿರುವ ಫೋಟೊಶೂಟ್ ಭಿನ್ನ ಕಾರಣಕ್ಕೆ ಹೊಸತೆನಿಸಿತು. ಹಳೇ ಬೆಂಗಳೂರಿನ ಚೆಲುವನ್ನು ಅರಸುತ್ತಾ ಹೊರಟಂತಿರುವ ಭೂಮಿ ಶೆಟ್ಟಿ ಫೋಟೊಶೂಟ್ ಗಮನ ಸೆಳೆಯುವಂತಿತ್ತು.

ನಟ ಹಾಗೂ ಛಾಯಾಗ್ರಾಹಕ ಕೂಡ ಆಗಿರುವ ಬಾಲಾಜಿ ಮನೋಹರ್ ಈಚೆಗೆ ಭೂಮಿ ಶೆಟ್ಟಿಯವರ 'ಫೋಟೊ ವಾಕ್' ಸೀರೀಸ್ ಮಾಡಿದ್ದಾರೆ.

'ಫೋಟೊ ವಾಕ್ ಸೀರೀಸ್ ಕುರಿತು ಬಾಲಾಜಿ ಜೊತೆ ಮಾತನಾಡಿದ್ದೆ. ಬೆಳ್ಳಂಬೆಳಿಗ್ಗೆ ಕೆ.ಆರ್. ಮಾರುಕಟ್ಟೆಗೆ ಹೋದೆವು. ಫೋಟೊಗ್ರಫಿ ಪರಿಕಲ್ಪನೆಯೂ ಸರಳವಾಗಿತ್ತು. ನಾನು ನನಗಿಷ್ಟ ಬಂದಂತೆ ಡ್ರೆಸ್ ಮಾಡಿಕೊಂಡಿದ್ದೆ. ಹಿಂದೆಂದೂ ನೋಡಿರದಂಥ ಬೆಂಗಳೂರನ್ನು ಕಂಡೆ ಹಾಗೂ ಹಲವು ಸಂಗತಿಗಳನ್ನು ತಿಳಿದುಕೊಂಡೆ. ಹಳೆಯ ಬೆಂಗಳೂರಿಗೊಮ್ಮೆ ಹೋಗಿ ಬಂದ ಅನುಭವವಾಯಿತು' ಎಂದು ಬೆಂಗಳೂರಿನ ಸೌಂದರ್ಯವನ್ನು ಕೊಂಡಾಡಿದ್ದಾರೆ ಭೂಮಿ.

ಬೆಂಗಳೂರು ಹಾಗೂ ಅದರ ಚೆಲುವಿನ ಬಗ್ಗೆ ಬಾಲಾಜಿ ಕೂಡ ಮಾತನಾಡಿದ್ದಾರೆ. 'ಕೆ.ಆರ್. ಮಾರುಕಟ್ಟೆ, ಮೆಜೆಸ್ಟಿಕ್, ನಗರ್ತಪೇಟೆ, ಗಾಂಧಿಬಜಾರ್, ಜಯನಗರದಂಥ ಕೆಲವು ಪ್ರದೇಶಗಳಲ್ಲಿ ಈಗಲೂ ಹಳೆಯ ಬೆಂಗಳೂರಿನ ವೈಬ್ ಇದೆ. ಬೆಂಗಳೂರು ನಗರ ಟ್ರಾಫಿಕ್‌ನಲ್ಲಿ ಕಳೆದುಹೋಗಿದೆ ಎಂದು ಕೆಲವೊಮ್ಮೆ ಅನ್ನಿಸುತ್ತದೆ. ಆದರೆ ಬೆಳ್ಳಂಬೆಳಿಗ್ಗೆ ಹಲವು ಕಡೆಗಳಿಗೆ ಹೋದರೆ, ಈಗಲೂ ಹಳೇ ಬೆಂಗಳೂರಿನ ಚೆಲುವು ಕಾಣುತ್ತದೆ' ಎಂದಿದ್ದಾರೆ.

ಚಿತ್ರ: ಭೂಮಿ ಶೆಟ್ಟಿ ಇನ್‌ಸ್ಟಾಗ್ರಾಂ



# ನೆಗೆಟಿವ್ ರೋಲ್‌ನಲ್ಲಿ ಲೂಸ್ ಮಾದ

'ದುನಿಯಾ' ಸಿನಿಮಾದಲ್ಲಿ ಲೂಸ್ ಮಾದ ಆಗಿ ನೆಗೆಟಿವ್ ರೋಲ್ ಮೂಲಕವೇ ಹೆಸರು ಮಾಡಿದ್ದ ನಟ ಯೋಗೇಶ್, ಇದೀಗ 16 ವರ್ಷಗಳ ನಂತರ ಮತ್ತೆ ನೆಗೆಟಿವ್ ಪಾತ್ರಕ್ಕೆ ಬಣ್ಣ ಹಚ್ಚುತ್ತಿದ್ದಾರೆ. ವಿನಯ್ ರಾಜಕುಮಾರ್ ಅಭಿನಯದ 'ಗ್ರಾಮಾಯಣ' ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

2007ರಲ್ಲಿ ಕನ್ನಡ ಸಿನಿಮಾರಂಗ ಪ್ರವೇಶಿಸಿ ಮೊದಲ ಸಿನಿಮಾದಲ್ಲೇ ನೆಗೆಟಿವ್ ಆಗಿ ಕಾಣಿಸಿಕೊಂಡಿದ್ದ ಯೋಗೇಶ್‌ಗೆ ಆ ಪಾತ್ರವೇ ಅಪಾರ ಅಭಿಮಾನಿಗಳನ್ನು ಕೊಟ್ಟಿತ್ತು. ಆ ಅಭಿಮಾನ ಅವರಿಗೆ 'ಲೂಸ್ ಮಾದ' ಎಂಬ ಹೆಸರು ಅಂಟಿಕೊಳ್ಳುವಂತೆ ಮಾಡಿತ್ತು. ಇದೀಗ ಮತ್ತೆ ಅಂಥ ಪಾತ್ರದಲ್ಲಿ ಯೋಗೇಶ್ ಕಾಣಿಸಿಕೊಳ್ಳುತ್ತಿದ್ದು, ಈ ಬಗ್ಗೆ ಸಂದರ್ಶನವೊಂದರಲ್ಲಿ ತಮ್ಮ ಅನಿಸಿಕೆ ಹೇಳಿಕೊಂಡಿದ್ದಾರೆ.

'ನಾನು ನೆಗೆಟಿವ್ ಪಾತ್ರವನ್ನು ತುಂಬಾ ಎಂಜಾಯ್ ಮಾಡಿಕೊಂಡು ಮಾಡುತ್ತೇನೆ. ಕೆಟ್ಟ ಹುಡುಗನಾಗಿರುವುದು ಸುಲಭ. ಹೀರೊ ಆಗುವುದು ತುಂಬಾ ಕಷ್ಟ. ಆ ಬಡಪಾಯಿ ಏನೆಲ್ಲಾ ಕಸರತ್ತುಗಳನ್ನು ಮಾಡಬೇಕು! ನೆಗೆಟಿವ್ ಕ್ಯಾರೆಕ್ಟರ್ ಹಾಗಲ್ಲ. ಅವನು ಕೆಟ್ಟವನಾಗಿದ್ದರೆ ಅಷ್ಟೇ ಸಾಕು' ಎಂದು ನಗುತ್ತಾ ಉತ್ತರಿಸಿದ್ದಾರೆ.

ಸಿನಿಮಾರಂಗದಲ್ಲಿ ತಮ್ಮ ಆರಂಭಿಕ ದಿನಗಳ ಕುರಿತು ಮಾತನಾಡಿರುವ ಅವರು, 'ಸಿನಿಮಾರಂಗದಲ್ಲಿ ನನ್ನ ಕರಿಯರ್ ಆರಂಭಿಸಿದಾಗ ನಾನು ಚಿಕ್ಕ ಹುಡುಗ. ಚಿಕ್ಕ ವಯಸ್ಸಿನಲ್ಲೇ ಯಶಸ್ಸು ಪಡೆದೆ. ಅದು ನನ್ನ ತಲೆಯಲ್ಲಿ ಕುಳಿತುಬಿಟ್ಟಿತು. ಆ ಹಂತದಲ್ಲಿ ನಾನು ಅದನ್ನು ಎಂಜಾಯ್ ಮಾಡಿದೆ ಅಷ್ಟೇ ಹೊರತು ಯಶಸ್ಸಿನ ನಿರ್ವಹಣೆ ಬಗ್ಗೆ ಯೋಚಿಸಲೇ ಇಲ್ಲ. ಆದರೆ ಕಾಲ ಮಗುಚಿದಾಗ, ಯಶಸ್ಸನ್ನು ನಿಭಾಯಿಸುವುದು ಎಷ್ಟು ಮುಖ್ಯ ಎಂಬುದು ಅರ್ಥವಾಗಲು ಶುರುವಾಯಿತು. ನಿಧಾನವಾಗಿ, ಜೊತೆಗೆ ನಿರಂತರವಾಗಿ ಸಣ್ಣ ಸಣ್ಣ ಬದಲಾವಣೆ ಮಾಡಿಕೊಂಡೆ. ಸಿನಿಮಾದೆಡೆಗೆ ನನ್ನ ದೃಷ್ಟಿಕೋನ ಬದಲಾಯಿಸಿಕೊಂಡೆ. ಇದೇ ಕಾರಣಕ್ಕೆ ನನ್ನ ಬಳಿ ಬಂದ ಎಲ್ಲಾ ಸಿನಿಮಾಗಳನ್ನು ಸುಮ್ಮನೆ ಒಪ್ಪಿಕೊಳ್ಳುವುದನ್ನು ನಿಲ್ಲಿಸಿದೆ' ಎಂದಿದ್ದಾರೆ.

ಸಿನಿಮಾರಂಗದಲ್ಲಿನ ಹೊಸ ಸವಾಲುಗಳ ಬಗ್ಗೆಯೂ ಮಾತನಾಡಿರುವ ಅವರು, 'ನಿರಂತರವಾಗಿ ಹೊಸತನಕ್ಕೆ ತೆರೆದುಕೊಳ್ಳುತ್ತಿದೆ ಸಿನಿಮಾಕ್ಷೇತ್ರ. ಹೀಗಾಗಿ ಎಲ್ಲಾ ರೀತಿಯ ಪಾತ್ರಗಳನ್ನೂ ನಿರ್ವಹಿಸುವಷ್ಟು ಸಮರ್ಥವಾಗಿ ನಾವಿರಬೇಕು. ಒಟಿಟಿ, ರೌಡಿಸಂ ಹಾಗೂ ಲವ್ ಸ್ಟೋರಿಗಳ ಹೊರತಾಗಿಯೂ ಸಿನಿಮಾಗಳಿವೆ ಎಂಬುದನ್ನು ಈ ಕ್ಷೇತ್ರದ ಎಲ್ಲರಿಗೂ ಅರ್ಥ ಮಾಡಿಸಿದೆ. ಕಮರ್ಷಿಯಲ್ ಹಾದಿಯಲ್ಲಿ ಗಟ್ಟಿ ಕಥೆ, ಪ್ರಯೋಗಶೀಲ ಸಿನಿಮಾಗಳು ಮತ್ತೆ ಕಮ್‌ಬ್ಯಾಕ್ ಆಗುತ್ತಿವೆ' ಎಂದು ಹೇಳಿದ್ದಾರೆ.

ನಿರ್ಮಾಣ ಸಂಸ್ಥೆ ಕಟ್ಟುವ ಕನಸನ್ನು ತೆರೆದಿಟ್ಟಿರುವ ಯೋಗೇಶ್, 'ನಿರ್ದೇಶನ ನನ್ನ ಮನಸ್ಸಿನಲ್ಲಿ ಇದ್ದೇ ಇದೆ. ಆ ಕೆಲಸವನ್ನು ಶೀಘ್ರವೇ ಕೈಗೊಳ್ಳುತ್ತೇನೆ. ಪ್ರೊಡಕ್ಷನ್ ಹೌಸ್ ನಿರ್ಮಿಸುವ ಯೋಚನೆಯಿದೆ. ಹೊಸ ತಂಡ, ಪ್ರತಿಭಾನ್ವಿತ ನಟರು, ಹೊಸ ಕಥೆಗಳನ್ನು ಪರಿಚಯಿಸುವ ಆಸೆ ನನ್ನದು' ಎಂದಿದ್ದಾರೆ. ■